ಜಾಗತಿಕ ಕರೆನ್ಸಿ. ಎಲ್ಲಿ ಬೇಕಾದರೂ ಮಾರಬಹುದು' ಎನ್ನುತ್ತಾರೆ ರಾಜನಹಳ್ಳಿ ಬದರಿನಾಥ್.

ಕಳೆದ ಹಲವಾರು ದಶಕಗಳಿಂದ ಚಿನ್ನದ ಬೇಡಿಕೆಯಾಗಲೀ ಬೆಲೆಯಾಗಲೀ ಕಡಿಮೆ ಆಗಿಲ್ಲವಾದರೂ ನೋಟು ಅಮಾನ್ಯೀಕರಣವಾದಾಗ ಅದರ ಒಂದು ಪರಿಣಾಮವೆಂಬಂತೆ ಚಿನ್ನದ ಬೇಡಿಕೆ ಸಾಕಷ್ಟು ಕುಸಿದಿತ್ತು. ಇದರ ಅರ್ಥ ಜನ ಚಿನ್ನ ಕೊಳ್ಳುವುದನ್ನು ಕಡಿಮೆ ಮಾಡಿದರು ಅಂತಲ್ಲ. ಆದರೆ ಚಿನ್ನ ಕೊಳ್ಳುವ ಸಾಮರ್ಥ್ಯ ತಾತ್ಕಾಲಿಕವಾಗಿ ಕಡಿಮೆ ಆದದ್ದರ ಹಿನ್ನೆಲೆಯಲ್ಲೆ ಒಟ್ಟಾರೆ ಚಿನ್ನಕ್ಕೆ ಸಂಬಂಧಪಟ್ಟ ವ್ಯಾಪಾರ/ ವ್ಯವಹಾರಗಳಿಗೂ ಪೆಟ್ಟು ಬಿದ್ದಿತ್ತು. ಆಗ ದೇಶದ ಒಟ್ಟೂ ಚಿನ್ನದ ಬೇಡಿಕೆ ಇದ್ದಕ್ಕಿದ್ದ ಹಾಗೆ ಶೇಕಡಾ 21ರಷ್ಟು ಕುಸಿದಿತ್ತು.

## ಚಿನ್ನ ಸರ್ವಾಂತರ್ಯಾಮಿ

ಉಡುಗೆ ತೊಡುಗೆಗಳಲ್ಲಿ ಚಿನ್ನ ಬಳಸಿರುವ ಉದಾಹರಣೆಯನ್ನು ಅನಾದಿ ಕಾಲದಿಂದಲೂ ಕಂಡಿದ್ದೇವೆ. ನಮ್ಮ ಅಜ್ಜಿಯಂದಿರ ರೇಷ್ಮೆ ಸೀರೆಗಳ ಜರಿಗಳಲ್ಲಿ ಚಿನ್ನ ಇದ್ದದ್ದುಂಟು. ಈಗ ಮದುವೆಗಳ ಪೋಷಾಕುಗಳಲ್ಲಿ ಚಿನ್ನ ಉಪಯೋಗವಾಗುವುದು ಪ್ರತಿಷ್ಠೆಯ ಪ್ರಶ್ನೆ. ನಿಜವೋ ಸುಳ್ಳೋ, ಅಂತೂ ಈ ಬ್ಲೌಸಿನ ಎಂಬ್ರಾಯಡರಿಯಲ್ಲಿ ಚಿನ್ನ ಇದೆ, ಈ ಸೀರೆಯಲ್ಲಿ ವಜ್ರ ಇದೆ ಎಂದು ವಾಟ್ಸಾಪಿನಲ್ಲಿ ಚಿತ್ರಗಳು ಹರಿದಾಡಿ, ಅವುಗಳನ್ನು ಸೃಷ್ಟಿ ಮಾಡಿದವರಿಗೆ ಲಾಭ ಮಾಡಿಕೊಡುತ್ತವೆ. ವಾಚುಗಳಲ್ಲಿ ಚಿನ್ನ ಹಾಗೂ ವಜ್ರದ ಬಳಕೆ ಸಾಕಷ್ಟು ಕಾಲದಿಂದ ಇದೆ.

ಔಷಧಿಗಳನ್ನು ಬಿಟ್ಟರೆ ಚಿನ್ನದ ಬಳಕೆ ಎಲೆಕ್ಟ್ರಾನಿಕ್ ಉಪಕರಣಗಳಲ್ಲಿ ಹೆಚ್ಚಿದೆ. ಮೊಬೈಲುಗಳಲ್ಲಿ, ಕಂಪ್ಯೂಟರಿನ ಸರ್ಕೀಟುಗಳಲ್ಲಿ, ದಂತಗಳಲ್ಲಿ, ಬಾಹ್ಯಾಕಾಶ ತಂತ್ರಜ್ಞಾನದಲ್ಲಿ, ವಿವಿಧ ಉಪಕರಣಗಳಲ್ಲಿ ಸಾಕಷ್ಟು ಪ್ರಮಾಣದಲ್ಲಿ ಚಿನ್ನದ ಬಳಕೆ ಆಗುತ್ತಿದೆ. ಬಾಹ್ಯಾಕಾಶದಲ್ಲಿ ವಾತಾವರಣ ಬಿಟ್ಟು ಹಾರುವ, ಸಾಕಷ್ಟು ಉಷ್ಣಾಂಶ ಬದಲಾವಣೆಯನ್ನು ತಡೆದುಕೊಳ್ಳಬೇಕಾದ ಆಕಾಶಕಾಯಗಳಲ್ಲಿ ಚಿನ್ನ ಹಲವು ಯಂತ್ರಗಳ ನಡುವೆ ಲೂಬ್ರಿಕೆಂಟ್ ಆಗಿ ಬಳಕೆಯಾಗುತ್ತದೆ. ಚಿನ್ನಕ್ಕಿರುವ ಅತ್ಯಂತ ಹೆಚ್ಚು ಬಿಸಿ ಹಾಗೂ ವಾತಾವರಣದ ಬದಲಾವಣೆಗಳು ಅದರ ಮೂಲವನ್ನು ಬದಲಾಯಿಸದಂತೆ ಉಳಿಸಿಕೊಳ್ಳುವ ಕ್ಷಮತೆ ಅದರ ಉಪಯೋಗಗಳನ್ನು ಹೆಚ್ಚಿಸಿದೆ.

ಗಾಜಿನ ಉತ್ಪಾದನೆಯಲ್ಲೂ ಚಿನ್ನ ಬಳಕೆ ಆಗುತ್ತದೆ. ಅತ್ಯಂತ ಎತ್ತರದ ಕಟ್ಟಡಗಳಿಗೆ ಅಳವಡಿಸುವ ಗಾಜು ಹೆಚ್ಚಿನ ಕ್ಷಮತೆ ಬೇಡುತ್ತದೆ. ಎತ್ತರಕ್ಕೆ ಹೋದಂತೆಲ್ಲ ಗಾಜಿನ ಮೇಲೆ ಬೀಳುವ ಒತ್ತಡ ಹೆಚ್ಚು ಆಗುವಂತೆ, ಅದರ ಪ್ರತಿಫಲನಾ ಶಕ್ತಿ ಕಡಿಮೆಯಾಗಿ ಕಟ್ಟಡದ ಒಳಗಿನ ತಾಪಮಾನ ಹೆಚ್ಚಾಗದಂತೆ ನೋಡಿಕೊಳ್ಳಬೇಕಾಗುತ್ತದೆ. ಒಂದು ತೆಳು ಪದರ ಬಂಗಾರದ ಬಣ್ಣ ಬಳಿದಾಗ ಈ ಎಲ್ಲಾ ಉದ್ದೇಶಗಳನ್ನೂ ಪೂರೈಸಬಹುದು ಎಂಬುದನ್ನು ಕಂಡುಹಿಡಿದ ತಜ್ಞರು ಆ ಬಳಕೆಯನ್ನು ಮುಂದುರೆಸಿದ್ದಾರೆ. ಬಂಗಾರವಿಲ್ಲದಿದ್ದಲ್ಲಿ ಹೊಳೆಹೊಳೆಯುವ ಕಟ್ಟಡಗಳ ಗಾಜು ಎಂದೋ ಫಳ್ ಎಂದು ಒಡೆದು ಹೋಗಿರುತ್ತಿತ್ತು. ಅಥವಾ ನೋಡುವವರ ಕಣ್ಣು ಕುರುಡಾಗುವಷ್ಟು ಬೆಳಕನ್ನು ಪ್ರತಿಫಲಿಸುತ್ತಿತ್ತು.

ಬಂಗಾರದ ಹೊದಿಕೆ ಹೊದಿಸಿರುವ ಕಟ್ಟಡಗಳ ಉದಾಹರಣೆ ಭಾರತದಲ್ಲೇ ಇದೆ. ಅಮೃತಸರದ ಚಿನ್ನದ ಹೊದಿಕೆ ಹೊದ್ದ ಸಿಖ್ ಪ್ರಾರ್ಥನಾ ಸ್ಥಳಕ್ಕೆ 'ಗೋಲ್ಡನ್ ಟೆಂಪಲ್' ಎಂದೇ ಹೆಸರು. ಇದೇ ಮಾದರಿಯಲ್ಲಿ ಹಲವು



ಗ್ರಾಹಕರಿಗೆ ಸಂಪೂರ್ಣ ವಿವರ ನೀಡಬೇಕು: ರಾಜನಹಳ್ಳಿ ಬದರಿನಾಥ್